**ಕರ್ನಾಟಕ ಸರ್ಕಾರ**
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/42/ಸಿಡಿಸಿ(1)/2024(1588162)

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ,
ಬೆಂಗಳೂರು-560001,
ದಿನಾಂಕ:20-11-2024.

## ಸುತ್ತೋಲೆ

ವಿಷಯ: ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್/ಇಂಜಿನಿಯರಿಂಗ್ ಕಾಲೇಜುಗಳ ವಿದ್ಯಾರ್ಥಿಗಳು ಸರ್ಕಾರದ ಯುವಪರ ಯೋಜನೆಗಳ ಮಾಹಿತಿಗಾಗಿ "ಯುವ ಕಣಜ ಪೋರ್ಟಲ್"ನಲ್ಲಿ ನೋಂದಣಿ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ: ಯುಸಕ್ರೀಇ/ಯುನಿ/33/ಯುಕ/2023-24, ದಿನಾಂಕ: 12.04.2024

****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಮತ್ತು ನಿಗಮ ಮಂಡಳಿಗಳ ಮೂಲಕ ಅನುಷ್ಠಾನಗೊಂಡಿರುವ/ ಅನುಷ್ಠಾನಗೊಳ್ಳುತ್ತಿರುವ 540ಕ್ಕೂ ಹೆಚ್ಚು ಯುವಜನ ಕೇಂದ್ರಿತ ಯೋಜನೆಗಳ ಒಂದು ಕಿರುಹೊತ್ತಿಗೆಯಾದ "ಯುವ ಕಣಜ" ವನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಹೊರತಂದಿರುತ್ತದೆ. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಯುವಜನರಿಗೆ ಸಂಬಂಧಪಟ್ಟ ಯೋಜನೆಗಳ ಬಗ್ಗೆ ರಾಜ್ಯದ ಯುವಜನತೆಯು ಸಮಗ್ರವಾದ ಮತ್ತು ನಿಖರವಾದ ಮಾಹಿತಿಯನ್ನು ಪಡೆದುಕೊಂಡು, ಸಬಲೀಕರಣಗೊಳ್ಳಬೇಕೆಂಬುದೇ ಈ ಕಿರುಹೊತ್ತಿಗೆಯ ಮುಖ್ಯ ಉದ್ದೇಶವಾಗಿದೆ.

ಸರ್ಕಾರದ ಉಚಿತ ಯೋಜನೆಗಳು, ಧನಸಹಾಯ ಯೋಜನೆಗಳು, ಶಿಕ್ಷಣ/ತರಬೇತಿ ಯೋಜನೆಗಳು, ನೋಂದಣಿ/ನವೀಕರಣ ಯೋಜನೆಗಳು, ಸೌಲಭ್ಯ /ಪೂರೈಕೆ ಯೋಜನೆಗಳ ಬಗ್ಗೆ ಸಂಪೂರ್ಣ ಮಾಹಿತಿ "ಯುವ ಕಣಜ ಪೂರ್ಟಲ್‌ನಲ್ಲಿ' (http://yuvakanaja.karnataka.gov.in/) ಲಭ್ಯವಿದ್ದು, ಸದರಿ ಪೋರ್ಟಲ್‌ಗೆ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳುವ ಮೂಲಕ ವಿದ್ಯಾರ್ಥಿಗಳು ಈ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿರುತ್ತದೆ.

ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್/ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರುಗಳ ಕರ್ತವ್ಯಗಳು:

- ಯುವ ಕಣಜ ಪೋರ್ಟಲ್‌ನಲ್ಲಿ ವಿದ್ಯಾರ್ಥಿಗಳ ನೋಂದಣಿಯ ಜವಾಬ್ದಾರಿಯನ್ನು ಕಾಲೇಜಿನ ಪ್ಲೇಸ್‌ಮೆಂಟ್ ಅಧಿಕಾರಿಗಳಿಗೆ ವಹಿಸಿ, ತಮ್ಮ ಕಾಲೇಜಿನ ಎಲ್ಲ ವಿದ್ಯಾರ್ಥಿಗಳು ಈ ಪೋರ್ಟಲ್‌ಗೆ ನೋಂದಾಯಿಸಿಕೊಳ್ಳುವಂತೆ ವ್ಯವಸ್ಥೆ ಮಾಡುವುದು.

- ಪ್ರತಿ ಕಾಲೇಜಿನಿಂದ ಯುವಕಣದ ಪೋರ್ಟಲ್‌ಗೆ ನೋಂದಣಿಗೊಂಡ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರ ಸಂಖ್ಯೆಯನ್ನು ಡಾ. ಹೆಚ್.ಟಿ. ಪ್ರಕಾಶ್, ಪ್ಲೇಸ್‌ಮೆಂಟ್ ಅಧಿಕಾರಿಗಳು, ತಾಂತ್ರಿಕ ಶಿಕ್ಷಣ ಇಲಾಖೆ ಇವರ Whatsapp ಸಂಖ್ಯೆ: 9900128504 ಕ್ಕೆ ದಿನಾಂಕ: 30.11.2024 ರೊಳಗೆ ಸಲ್ಲಿಸುವುದು.

- ಹೆಚ್ಚಿನ ಮಾಹಿತಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಶ್ರೀ ಪ್ರತಾಪ್ ಕೆ. ಪರಾಶರ್, ಭಾರತೀಯ ಆಡಳಿತ ಫೆಲೋಶಿಪ್ (ದೂ.9845029676) ರವರನ್ನು ಸಂಪರ್ಕಿಸುವುದು.

**ಜಂಟಿ ನಿರ್ದೇಶಕರು (ಸಿಡಿಸಿ)**

ಇವರಿಗೆ: ಮುಂದಿನ ಸೂಕ್ತ ಕ್ರಮಕ್ಕಾಗಿ.

ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್/ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿ: ಮಾಹಿತಿಗಾಗಿ

1. ಆಯುಕ್ತರ ಆಪ್ತಶಾಖೆ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ನಿರ್ದೇಶಕರ ಆಪ್ತಶಾಖೆ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಡಾ. ಹೆಚ್.ಟಿ. ಪ್ರಕಾಶ್, ಪ್ಲೇಸ್‌ಮೆಂಟ್ ಅಧಿಕಾರಿಗಳು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು-ಸೂಕ್ತ ಕ್ರಮಕ್ಕಾಗಿ.
4. ಇ-ಆಡಳಿತ ವಿಭಾಗಕ್ಕೆ-ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲು.
5. ಶ್ರೀ ಪ್ರತಾಪ್ ಕೆ. ಪರಾಶರ್, ಭಾರತೀಯ ಆಡಳಿತ ಫೆಲೋಶಿಪ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.